**ದಿನಾಂಕಃ 18-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಮುಂದುವೆರದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಾದ ಶ್ರೀ ಎಸ್.ವಿ.ಎಂ. ವಕೀಲರಿಂದಃ**

ದಿಃ 26-08-2020 ರಂದು ಆದ ರಸ್ತೆ ಅಪಘಾತದಲ್ಲಿ ನನಗೆ ಗಾಯಗಳು ಆಗಿವೆ ಎನ್ನುವ ಬಗ್ಗೆ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಉಪವಿಭಾಗದ ನ್ಯಾಮತಿ ಪೋಲಿಸ್ ಠಾಣೆಯಲ್ಲಿ ದಿಃ 27-08-2020 ರಂದು ಅಪರಾಧ ಸಂಖ್ಯೆ.102/2020 ರಲ್ಲಿ ದಾಖಲಾಗಿರುವ ಪ್ರಥಮ ವರ್ತಮಾನ ವರದಿ, ದೂರು, ಸ್ಥಳ ಪಂಚನಾಮೆ, ಎರಡು ವಾಹನ ಪಂಚನಾಮೆಗಳು, ಐ.ಎಂ.ವಿ ವರದಿ, ನನ್ನ ಗಾಯದ ಪ್ರಮಾಣ ಪತ್ರ ಮತ್ತು ಅಂತಿಮ ವರದಿಯ ಯಥಾ ಪ್ರತಿಗಳನ್ನು ಹಾಜರು ಮಾಡಿದ್ದೇನೆ, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ

ನಿ.ಪಿ-8 ಎಂದು ಗುರುತಿಸಲಾಯಿತು.

ದಾವಣಗೆರೆಯ ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಯ ಒಂದು ಔಷಧಿಯ ರಶೀದಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-9 ಎಂದು ಗುರುತಿಸಲಾಯಿತು.

ದಾವಣಗೆರೆಯ ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಯ ಡಾ. ನಿತಿನ್ ಎ.ಬಿ ರವರು ನೀಡಿರುವ ನನ್ನ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-10 ಎಂದು ಗುರುತಿಸಲಾಯಿತು.

ಸದರಿ ದಾವಣಗೆರೆಯ ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಯ ಒಂದು ಓ.ಪಿ.ಡಿ ಕಾರ್ಡನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-11 ಎಂದು ಗುರುತಿಸಲಾಯಿತು.

ನನ್ನ ಬಲ ತೊಡೆ ಮತ್ತು ಬಲಗಾಲಿನ ಮಂಡಿ ಕೆಳಗೆ ಹಾಗು ಬಲಪಾದಕ್ಕೆ ಸಂಬಂಧಿಸಿದ 3 ಎಕ್ಸ-ರೇ ಪಿಲ್ಮಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು ಒಟ್ಟಾಗಿ ನಿ.ಪಿ-12 ಎಂದು ಗುರುತಿಸಲಾಯಿತು.

ಭಾರತ ಸರ್ಕಾರದವರು ನೀಡಿರುವ ನನ್ನ ವಿಶಿಷ್ಟ ಗುರುತಿನ

ಚೀಟಿ ಮತ್ತು ಪಾನ್ ಕಾರ್ಡನ ನೋಟರಾಜ್ಞ ಪ್ರತಿಗಳನ್ನು (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)ಹಾಜರು ಮಾಡಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-13 ಮತ್ತು ನಿ.ಪಿ-14 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.